ಶ್ರೀ ಬಿ. ಹುಚ್ಚೇಗೌಡ.—ಇದು ಮೇಜರ್ ಕೆರೆ, ರಸ್ತೆ ಪಕ್ಕದಲ್ಲಿ ಇದೆ. ವರ್ಷಕ್ಕೆ ಒಂದು ಸಾರಿ ಆದರೂ ಅಸಿಸ್ಟೆಂಟ್ ಇಂಜನಿಯರಾಗಲಿ, ಎಕ್ಸಿಕ್ಯೂಟೀವ್ ಇಂಜನಿಯರಾಗಲಿ ತನಿಖೆಮಾಡಿ ರಿಪೋರ್ಟ್ ಮಾಡಿದ್ದಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ರೆವಿನ್ಯೂ ಡಿಪಾರ್ಟ್‌ಮೆಂಟಿನ ಮೇಲ್ವಿಚಾರಣೆಯಲ್ಲಿದೆ ಎಂಬುದು ಮಾನ್ಯ ಸದಸ್ಯರಿಗೂ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ.—ಅಂದಾಕ್ಷಣಕ್ಕೆ ಆ ರೀತಿ ಮಾಡಬಾರದು ಎಂದಿದೆಯೇ? ಇಂಜನಿಯರಿಂಗ್ ಇಲಾಖೆಯ ಎಕ್ಸಿಕ್ಯೂಟಿವ್ ಇಂಜನಿಯರು ಈ ರೀತಿ ಡಿಫೆಕ್ಟ್ ಇದೆ ಎಂದು ವರದಿಮಾಡಿ ಎಷ್ಟು ವರ್ಷಗಳಾದವು?

ಶ್ರೀ ಎಚ್. ಎಂ. ಚನ್ನಬಸಪ್ಪ.—1943 ನೇ ಇಸವಿಯಲ್ಲಿ ಲೀಕೇಜ್ ಇದೆ ಎಂದು ಮೊದಲು ವರದಿ ಆಯಿತು, ಆಗ ಮುಚ್ಚಿದೆವು. 1949 ರಲ್ಲಿ ಒಂದು ಸಾರಿ, 1955 ರಲ್ಲಿ ಒಂದು ಸಾರಿ ಲೀಕೇಜ್ ಆಗಿದೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಆ ರೀತಿ ಆಗಿದ್ದ ಲೀಕೇಜನ್ನು ಸರಿಯಾಗಿ ಮುಚ್ಚಲಿಲ್ಲ ಎಂದು ತಿಳಿದುಕೊಳ್ಳೋಣವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರಿಯಾಗಿ ಮುಚ್ಚಿದ್ದರೂ ಕೂಡ, ಇನ್ನೂ ಅನೇಕ ಕಾರಣಗಳು ಇವೆ. ಅಲ್ಲಿ ಕೆಲವು ಮರಗಳು ಇದ್ದವು. ಆ ಮರಗಳನ್ನು ಕಡಿದಿದ್ದರಿಂದ ಆ ಮರಗಳ ಬೇರುಗಳು ನಶಿಸಿಹೋಗಿ ಆ ಮೂಲಕ ನೀರು ಹೋಗುತ್ತಾ ಇತ್ತು.

ಶ್ರೀ ಬಿ. ಹುಚ್ಚೇಗೌಡ.—ಅದನ್ನು ಕಂಡು ಹಿಡಿಯುವುದಕ್ಕೆ ಇಷ್ಟು ವರ್ಷ ಬೇಕಾಯಿತೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇರುಗಳು ಎಲ್ಲೆಲ್ಲಿ ಒಳಗೆ ಹೋಗಿವೆ ಎಂಬುದು ಸಾಮಾನ್ಯವಾಗಿ ಗೊತ್ತಾಗುವುದಿಲ್ಲ.

Mr. SPEAKER.—You are discussing the question. You are not asking for information.

Sri B. HUTCHE GOWDA.—When was the leakage found out?

Sri H. M. CHANNABASAPPA.—That has been answered.

ಶ್ರೀ ಬಿ. ಹುಚ್ಚೇಗೌಡ.—ಯಾವ ಒಂದು ಕೆರೆ ಏರಿ ಆಗಲಿ ಅಥವಾ ತೂಬು ಆಗಲಿ ಅದರಲ್ಲಿ ಡಿಫೆಕ್ಟ್ ಇದ್ದೇ ಇರಬೇಕು ಎಂಬುದು ಸರ್ಕಾರದ ಅಭಿಪ್ರಾಯವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಇರಬಾರದು ಎಂಬುದೇ ನಮ್ಮ ಆಶಯ.

Ramasamudra Tank, Chamarajanagar Taluk (Repairs).

Q.—545. Sri U. M MADAPPA (Chamarajanagar).—

Will the Government be pleased to state:—

(*a*) whether estimate has been prepared for repairing the Ramasamudra Tank in Chamarajanagar Taluk;

(*b*) if so, the amount of the estimate;

(*c*) the number of acres of land under cultivation below the tank;

(*d*) whether the raiyats have executed mutchalika to pay the contribution;

(*e*) when the estmate was prepared;

(*f*) the date on which the raiyats executed the mutchalika?

A.—Sri H. M. CHANNABASAPPA (Minister for Industries).—

(*a*) Yes.

(*b*) Rs. 1,08,300.

(*c*) 1,650 acres and 36 guntas.

(*d*) Yes.

(*e*) 1953-54.

(*f*) On 12th September 1954.

ಶ್ರೀ ಯು. ಎಂ. ಮಾದಪ್ಪ.—ಈ ಅಂದಾಜು ಯಾವ ಆಫೀಸಿನಲ್ಲಿದೆ ಸರ್ಪಮಿ, ಸೂಪರ್‌ಡಿಚೆಂಡಿಂಗ್ ಇಂಜನಿಯರ ಆಫೀಸಿನಲ್ಲಿದೆಯೋ, ಚೀಫ್ ಇಂಜನಿಯರ ಆಫೀಸಿನಲ್ಲಿದೆಯೋ ಅಥವಾ ತಮ್ಮ ಹತ್ತಿರ ಇದೆಯೋ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಚೀಫ್ ಇಂಜನಿಯರ ಆಫೀಸಿನಲ್ಲಿದೆ.

ಶ್ರೀ ಯು. ಎಂ. ಮಾದಪ್ಪ.—ಚೀಫ್ ಇಂಜನಿಯರ ಆಫೀಸಿಗೆ ಬಂದು ಎಷ್ಟು ದಿವಸವಾಯಿತು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಸಮಾಚಾರ ಈಗ ಸಧ್ಯದಲ್ಲಿ ಇಲ್ಲ.

ಶ್ರೀ ಯು. ಎಂ. ಮಾದಪ್ಪ.—ಇದು ರೆವ್ಯೂನ ರೇಟೀವ್ ಆಗಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು, ರೆವ್ಯೂನ ರೇಟೀವ್ ಆಗಿದೆ.

ಶ್ರೀ ಯು. ಎಂ. ಮಾದಪ್ಪ.—ಈ ಸಾರಿ ಕೆಲಸ ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಸಾರಿ ಕೆಲಸ ತೆಗೆದುಕೊಳ್ಳುವುದನ್ನು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—ಈ ಕೆರೆಯ ನಾಲೆ ದುರಸ್ತು ಮಾಡುವುದು ಕೂಡ ಈ ಮೊಬಲಗಿನಲ್ಲಿ ಸೇರಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾಲೆ ದುರಸ್ತು ಮಾಡುವುದು ಸೇರಿಲ್ಲ. ಕೆರೆ ಕೋಡಿಯನ್ನು ಒಂದು ಅಡಿ ಎತ್ತರಿಸಬೇಕೆಂದು ಅಂದಾಜಾಗಿದೆ.

ಶ್ರೀ ಬಿ. ರಾಚಯ್ಯ.—ಒಂದು ಅಡಿ ಎತ್ತರಿಸುವುದರಿಂದ ಕೆರೆ ಏರಿ ಭದ್ರವಾಗಿರುತ್ತದೆ ಎಂದು ತಮ್ಮ ಅಭಿಪ್ರಾಯವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರಿಂದ ಏನಾದರೂ ಏರಿಗೆ ದುಷ್ಪರಿಣಾಮವಾಗುವುದಿದ್ದರೆ ಆ ರೀತಿ ಆಗದೆ ಇರುವಂತೆ ತಕ್ಕ ಬಂದೋಬಸ್ತು ಮಾಡಬೇಕೆಂದು ಮಾಡಿದ್ದೇವೆ.

ಶ್ರೀ ಬಿ. ರಾಚಯ್ಯ.—1954ನೇ ಇಸವಿಯಲ್ಲಿ ಅಂದಾಜು ತಯಾರಾದರೂ ಇನ್ನೂ ಕೂಡ ಇದನ್ನು ಮಂಜೂರುಮಾಡದೇ ಇರುವುದಕ್ಕೆ ಕಾರಣವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಲ್ಪಮಟ್ಟಿಗೆ ಪತ್ರವ್ಯವಹಾರ ನಡೆದದ್ದರಿಂದ ನಿಧಾನವಾಗಿದೆ. ಈ ವರ್ಷವೇ ಕೆಲಸ ಪ್ರಾರಂಭಮಾಡುವ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.